## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.
## ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 3464 /2021

**ಚಾಸಾ :- 5 / ಪ್ರಾಸಾ :- 08**

| | |
|---|---|
| ಹೆಸರು | ಲಕ್ಷ್ಮಮ್ಮ |
| ಗಂಡನ ಹೆಸರು | ಶಿವಣ್ಣ |
| ವಯಸ್ಸು | 50 |
| ಉದ್ಯೋಗ | ವ್ಯವಸಾಯ |
| ವಿಳಾಸ | ಸೀಗೆಕುಪ್ಪೆ |

**ದಿನಾಂಕಃ 22.08.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಚಾಸಾ-1 ರಿಂದ 4 ಮತ್ತು 6 ರವರ ಪರಿಚಯ ಇರುತ್ತದೆ. ಆರೋಪಿಗಳೂ ಸಹ ಪರಿಚಯ ಇರುತ್ತಾರೆ. ಈಗ್ಗೆ 3 ವರ್ಷದ ಹಿಂದೆ ಕುರಿ, ಮೇಕೆಗಳನ್ನು ಸಾಕಾಣಿಕೆ ಮಾಡುತ್ತಿದ್ದೆವು. ನಾಯಿಗಳ ಕಾಟ ಜಾಸ್ತಿ ಆಗಿತ್ತು , ಆಗ ಕಾಂಪೌಂಡ್ ಆಕಲು ಹೋದಾಗ ಚಾಸಾ-1 ರವರು ನೀರನ್ನು ಹಾಕುತ್ತಿದ್ದರು. ಆಗ ಚಂದ್ರಕಲಾ ರವರು ಬಂದು ಏಕೆ ನೀರನ್ನು ಹಾಕುತ್ತಿದ್ದೀರಿ ಎಂದು ನಾನು ತೆಗೆದುಕೊಳ್ಳಬೇಕಾದ ಜಾಗ ಎಂದು ಜಗಳ ಆಡುತ್ತಿದ್ದರು. ನಾನು ಮನೆಯ ಒಳಗಡೆ ಇದ್ದೆನು. ನಂತರ ನಾನು ಚಾಸಾ-2 ಮತ್ತು 5 ರವರನ್ನು ಚಂದರ ಚಂದ್ರಕಾಲಾರವರು ಗಲಾಟೆ ಮಾಡುತ್ತಿದ್ದಾರೆ ಎಂದು ಕರೆದೆನು ಅಷ್ಟರಲ್ಲಿ ಚಂದ್ರಕಲಾರವರು ಚಾಸಾ-1 ರವರ ಕುತ್ತಿಗೆ ಪಟ್ಟಿಗೆ ಕೈಯನ್ನು ಕಹಾಕಿ ಎಳೆಯುತ್ತಿದ್ದರು. ನಂತರ ನಾವೆಲ್ಲಾ ಹೋಗಿ ಬಿಡಿ ಎಂದು ಹೇಳುತ್ತಿದ್ದೆವು ಆಗ ಅವರು ನನ್ನನ್ನು ಮುಟ್ಟಿ ನೋಡಿ ನಿಮ್ಮನ್ನೆಲ್ಲಾ ಸಬ್ ಜೈಲಿಗೆ ಸೇರಿಸುತ್ತೇನೆ ಎಂದು

ಹೇಳುತ್ತಿದ್ದರು. ನಂತರ ಅಕ್ಕಪಕ್ಕದವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ 1 ರಿಂದ 3 ನೇ ಆರೋಪಿಗಳು ಬೆಂಕಿಯನ್ನು ಇಟ್ಟುಬಿಡುತ್ತೇನೆ, ನಮಗೆ ಏನು ಮಾಡುತ್ತಾರೆ ಯಾರಾದರೂ ನಮ್ಮನ್ನು ಮುಟ್ಟಲು ಆಗುತ್ತದೆಯಾ ಎಂದು ಹೇಳುತ್ತಿದ್ದರು. 1 ನೇ ಆರೋಪಿಯು ನಮ್ಮ ಯಜಮಾನರ ಲಾರಿಗಳು ಮತ್ತು ಟೆಂಪೋಗಳು ಇರುತ್ತವೆ ಟೆಂಪೋಗಳನ್ನು ಹತ್ತಿಸುತ್ತೇವೆ ನಾವು ಏನೆ ಮಾಡಿದರೂ ಜಯಿಸಿಕೊಂಡು ಬರುತ್ತೇವೆ ಎಂದು ಹೇಳಿರುತ್ತಾರೆ. ನಂತರ ನಾವು ಪೋಲಿಸ್ ದೂರನ್ನು ಕೋಡೋಣ ಎಂದು ಹೇಳಿದಾಗ ಆರೋಪಿಗಳು ನಾವು ಯಾರಿಗೂ ಹೆದರುವುದಿಲ್ಲ , ಏನಾದರೂ ಮಾಡಿಕೊಳ್ಳಿ ಎಂದು ಹೇಳಿದರು . ನಂತರ ನಮ್ಮ ಮನೆಗೆ ನಾವು ಬಂದಿರುತ್ತೇವೆ, ಆರೋಪಿಗಳು ಅವರ ಮನೆಗೆ ಹೋಗಿರುತ್ತಾರೆ.

**ಪಾಟೀಸವಾಲು** ಃ- **ಶ್ರೀ. ಎಂಎಸ್ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಸರ್ವೆ ನಂ.60/9 ರಲ್ಲಿ ಎಷ್ಟು ವರ್ಷಗಳಿಂದ ಮನೆಯನ್ನು ಕಟ್ಟಿಕೊಂಡಿದ್ದಿರಿ ಎಂದರೆ ಸಾಕ್ಷಿ ಅಂದಾಜು 15 ವರ್ಷ ಎಂದು ನುಡಿಯುತ್ತಾರೆ. ಸರ್ವೆ ನಂ.60/9 ಒಟ್ಟು 6 ಗುಂಟೆ ಜಮೀನು ಇರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದರಲ್ಲಿ ನೀವು 20 -30 ಅಡಿಯಷ್ಟು ಮನೆಯನ್ನು ಕಟ್ಟಿಕೊಂಡಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಸ್ವತ್ತು ನಿಮಗೆ ಯಾವುದೂ ಕ್ರಯಪತ್ರದ ಮುಖಾಂತರ ಬಂದಿರುವುದಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ 60/9 ರಲ್ಲಿ 3 ಗುಂಟೆ ಜಮೀನನ್ನು ಸದರಿ ಚಂದ್ರಕಲಾರವರು ಕರೀದಿ ಮಾಡಿದ್ದರು ಎಂದರೆ ಸಾಕ್ಷಿ ನಾನು ಅವರನ್ನು ಗಲಾಟೆ ಆದ ದಿನವೆ ನೋಡಿದ್ದು ಅದಕ್ಕೂ ಮೊದಲು ನೋಡಿರಲಿಲ್ಲ ಎಂದು ನುಡಿಯುತ್ತಾರೆ. ಚಂದ್ರಕಲಾರವರು ಸದರಿ ಜಮೀನಿನಲ್ಲಿ ಪಾಯವನ್ನು ತೆಗೆದಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಸದರಿ ಜಾಗದಲ್ಲಿ ಇಂದಿಗೂ ಕಾಂಪೌಂಡ್ ಇರುವುದಿಲ್ಲ ಕಾಂಪೌಂಡ್ ಹಾಕಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೀರಿ

ಎಂದರೆ ಸಾಕ್ಷಿ ಕಾಂಪೌಂಡ್ ?ಇದೆ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಜಾಗದಲ್ಲಿ ಚಂದ್ರಕಲಾ ರವರು ಕಾರನ್ನು ನಿಲ್ಲಿಸುತ್ತಿದ್ದು ಪಾಯವನ್ನು ತೋಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಅವರ ಸ್ವಾಧೀನವನ್ನು ಕಿತ್ತುಕೊಳ್ಳಬೇಕೆಂಬ ಉದ್ದೇಶದಿಂದ ನಿಮ್ಮ ಅಣ್ಣನ ಮಗನ ಕಡೆಯಿಂದ ಸುಳ್ಳು ದೂರನ್ನು ಕೊಡಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಕುತ್ತಿಗೆ ಪಟ್ಟಿಯನ್ನು ಹಿಡಿದು ವಾಚ್ಯ ಶಬ್ದಗಳಿಂದ ಬೈಯ್ದರು ಎಂದು ಸುಳ್ಳು ಹೇಳುತ್ತಿದ್ದಿರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಅಣ್ಣನ ಮಗ ಕೊಟ್ಟ ಸುಳ್ಳು ಪಿರ್ಯಾದಿಗೆ ನ್ಯಾಯಾಲಯದಲ್ಲಿ ಬಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**

## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್‌.ಸಿ.
## ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 3464 /2021

**ಚಾಸಾ :- 02 / ಪ್ರಾಸಾ :- 02**

**ದಿನಾಂಕಃ 22.08.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಶ್ರೀ. MSS** ವಕೀಲರಿಂದ **ಆರೋಪಿಗಳ** ಪರವಾಗಿ :-

ಸರ್ವೆ ನಂ .60/9 ರ 3 ಗುಂಟೆ ಜಮೀನನನ್ನು ಚಂದ್ರಕಲಾ ರವರು ಓರಲ್ ಅಗ್ರಿಮೆಂಟ್ ಮುಹಾಂತರ ಕೊಂಡುಕೊಂಡಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಲಕ್ಷ್ಮಮ್ಮರವರು ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿ ನನ್ನ ಪತ್ನಿ ಎಂದು ನುಡಿಯುತ್ತಾರೆ. ಸರ್ವೆ ನಂ .60/9 ರ 3 ಗುಂಟೆ ಜಮೀನಿನಲ್ಲಿ ನೀವು ಮನೆಯನ್ನು ನಿರ್ಮಿಸಿಕೊಂಡು ವಾಸ ಇದ್ದಿದ್ದಿರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸರ್ವೆ ನಂ .60/9 ರಲ್ಲಿ ಒಟ್ಟು 6 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ 3 ಗುಂಟೆ ಜಮೀನನ್ನು ನಿಮಗೆ ಬಾಯಿ ಮಾತಿನಲ್ಲಿ ಬಿಟ್ಟುಕೊಟ್ಟಿದ್ದರು ಅದರಲ್ಲಿ ನೀವು ಮನೆಯನ್ನು ಕಟ್ಟಿಕೊಂಡಿದ್ದಿರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಉಳಿದ 3 ಗುಂಟೆ ಜಮೀನಿನಲ್ಲಿ ಚಂದ್ರಕಲಾ ರವರು ಮನೆಯನ್ನು ನಿರ್ಮಿಸಲು ಪಾಯ ಹಾಕಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆ ಬಗ್ಗೆ ಸಿವಿಲ್ ದಾವೆಯನ್ನು ನೀವೆ ಸಲ್ಲಿಸಿದ್ದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಿವಿಲ್ ದಾವೆಯನ್ನು ಹಾಕಿದ ಸಮಯದಲ್ಲಿ ಕಾಂಪೌಂಡ್ ಕಟ್ಟಿರಲಿಲ್ಲ ಎಂದರೆ ಸಾಕ್ಷಿ ಕಾಂಪೌಂಡ್ ಕಟ್ಟಲು ಹೋದಾಗ ನಮಗೆ ಗಲಾಟೆ ಮಾಡಿದರು ನಾವು ಸಿವಿಲ್ ದಾವೆಯನ್ನು ಹಾಕಿದಾಗ ನಮಗೆ ನ್ಯಾಯಾಲಯವು

ಅನುಮತಿ ಕೊಟ್ಟಾಗ ಕಾಂಪೌಂಡ್ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಕಾಂಪೌಂಡ್ ಕಟ್ಟಲು ನಿಮಗೆ ಯಾವುದೇ ನ್ಯಾಯಾಲಯ ಅನುಮತಿ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಕೊಟ್ಟಿರುತ್ತಾರೆ ಎಂದು ನುಡಿಯತ್ತಾರೆ. ಇವತ್ತಿಗೂ ಸರ್ವೆನಂ.60/9 ರ 3 ಗುಂಟೆ ಜಮೀನನ್ನು ಕಾಂಪೌಂಡ್ ಇರುವುದಿಲ್ಲ ಎಂದರೆ ಸಾಕ್ಷಿ ಇರುತ್ತದೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯ ಸ್ವತ್ತನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ಪಿರ್ಯಾದಿಯನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ದಿನಾಂಕ 26.06.2021 ರಂದು ಎಷ್ಟು ಭಾರಿ ಗಲಾಟೆ ಆಗಿರುತ್ತದೆ ಎಂದರೆ ಸಾಕ್ಷಿ 3-4 ಭಾರಿ ಗಲಾಟೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 3-4 ಭಾರಿ ಗಲಾಟೆ ಆಗಿರುತ್ತದೆ ಎಂದು ನೀವು ಪೋಲಿಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಗಲಾಟೆ ಆಯಿತು ಎಂದು ಹೇಳಿರುವ ದಿನ ಸದರಿ ಗಲಾಟೆಯನ್ನು ನೋಡಿದವರು ಯಾರಾದರೂ ಇದ್ದಾರಾ ಎಂದರೆ ಸಾಕ್ಷಿ ಇದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.60/9 ರ ಜಮೀನಿನ ಸುತ್ತಮುತ್ತ ಸುಮಾರು ಮನೆಗಳು ಇವೆ ಎಂದರೆ ಸಾಕ್ಷಿ ಇವೆ ಎಂದು ನುಡಿಯುತ್ತಾರೆ. ಎಷ್ಟು ಮನೆಗಳು ಇವೆ ಎಂದರೆ ಸಾಕ್ಷಿ 4-5 ಮನೆಗಳು ಇವೆ ಎಂದು ನುಡಿಯುತ್ತಾರೆ. ಗಲಾಟೆ ಆಯಿತು ಎಂದು ಹೇಳಿರುವ ಸಮಯದಲ್ಲಿ ಆರೋಪಿಗಳು ಇದ್ದಿದ್ದರ ಎಂದರೆ ಸಾಕ್ಷಿ ಇದ್ದರು ಎಂದು ನುಡಿಯುತ್ತಾರೆ. ನಿಮ್ಮ ಹೇಳಿಕೆಯಲ್ಲಿ ಮೊದಲು 1 ಮತ್ತು 3 ನೇ ಆರೋಪಿಗಳು ಬಂದಿದ್ದರು ಎಂದು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 26.06.2021 ರಂದು 3 ನೇ ಆರೋಪಿಯು ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದಿರಲಿಲ್ಲ ಎಂದರೆ ಸಾಕ್ಷಿ ನಮಗೆ ಗೊತ್ತಿರಲಿಲ್ಲ ಎಂದುನುಡಿಯುತ್ತಾರೆ. 3 ನೇ ಆರೋಪಿಯು ನಿಮಗೆ ಏನು ಬೇಕಾದರೂ ಮಾಡುತ್ತೇಃವೆ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ ಎಂದು ಹೇಳಿದ್ದ ಅದು ಎಲ್ಲಾ ಸುಳ್ಳು ಎಂದರೆ ಸಾಕ್ಷಿ ನಿಜ ಎಂದು

ನುಡಿಯುತ್ತಾರೆ. ನೀವು ಆರೋಪಿಗಳಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಪೋಲಿಸರೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**